# ವಿಷಯದ ವಿಚಾರ ಬಿಡು ವಿಹಿತ ಕರ್ಮವ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 24.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 94.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 518.
4. **Note:** The wordings given without highlights are as per Ref. 1. The wordings in Ref. 3 are matching with Ref. 1 except few differences which are marked in yellow highlights. The lyrics in Ref. 2 are same as in Ref. 3.
5. **Note:** The singer has followed lyrics as in Ref. 3.

ರಾಗ: ರೇಗುಪ್ತಿ ತಾಳ: ಝುಂಪೆ

ವಿಷಯದ ವಿಚಾರ ಬಿಡು, ವಿಹಿತ ಕರ್ಮವ ಮಾಡು
ವೈರಾಗ್ಯ ಭಾಗ್ಯ ಬೇಡು || ಪ ||

ವಿಷವೆಂದು ಕಾಮಕ್ರೋಧಗಳೆಲ್ಲವೀಡಾಡು
ಮಸಣ ಮನವೇ ಮಾಧವನನು ಕೊಂಡಾಡು || ಅಪ ||

ಅನುದಿನದಿ ಹರಿಕಥೆಯ ಕೇಳಿ ಸಂತೋಷಪಡು
ದಿನದಿನವು (ವಿನಯದಿ) ಸಜ್ಜನರ ಕೂಡು
ಮನಮುಟ್ಟಿ ದುರಾಚಾರ ಮಾಳ್ಪರನು ನೀ ಕಾಡು
ಹಣ ಹೊನ್ನು ಪರ ಹೆಣ್ಣು ಹೆಂಟೆಯಂತೆ (ಹೆಂಚೆಂದು) ನೋಡು || 1 ||

ವೇದ ಶಾಸ್ತ್ರಾರ್ಥ ತತ್ವದ ವಿಚಾರವ ಮಾಡು
ಮಾಧವನ ಭಕ್ತಿ ಬೇಡು
ಪಾದದಲಿ ಪುಣ್ಯತೀರ್ಥದ ಯಾತ್ರೆ ಮಾಡು ಮಧು-

ಸೂದನನ ಕೀರ್ತಿ ಸಂಕೀರ್ತನೆಯ ಮಾಡು || 2 ||
(ಪಾದದಿಂದಲಿ ತೀರ್ಥಯಾತ್ರೆಗಳ ನೀ ಮಾಡು
ಖೇದ ಪಡದನುದಿನದಿ ಸಂತೋಷ ಕೂಡು)

ಅಂಬು ಗುಳ್ಳೆಗಳಂತೆ ಎಂದಿಗಿದ್ದರು ದೇಹ
ನಂಬಿ ನೀ ಕೆಡಲು ಬೇಡ
ಕೊಂಬುವರು ಬಂದರಾಕ್ಷಣಕೆ ಬೆಲೆಯಾಗುವುದು
ಅಂಬುಜಾಕ್ಷ ಪುರಂದರ ವಿಠಲನ ನೆನೆ ಮನವೆ || 3 ||
(ನಂಬದಿರು ಈ ದೇಹ ಅಂಬು ಗುಳ್ಳೆಯಂತೆ
ನಂಬಿ ನೀ ಕೆಡಲು ಬೇಡ
ಕೊಂಬುವರು ಬಂದರೆ ಕೊಡರೊಂದು ರುವ್ವಿಯನು
ಅಂಬುಜಾಕ್ಷ ಪುರಂದರ ವಿಠಲನ್ನ ನೆನೆ ಮನವೆ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮಸಣಮನ** – ಸ್ಮಶಾನದಂತೆ ಅಸಹ್ಯವಾದ, ಭೀಕರವಾದ ಮನಸ್ಸು.

**ಹೆಂಚೆಂದು** – ಹೆಂಚು ಮನೆಗೆ ಚಾವಣಿಯಾಗಿ ಹೊದಿಸುವ ಸೂರು; ಹೆಂಚಿನ ಚೂರೆಂದರೆ ತೀರ ನಿಕೃಷ್ಟವಾದ ವಸ್ತು; ಯಾವ ಕೆಲಸಕ್ಕೂ ಬಾರದ್ದು.

**ಅಂಬು** = ನೀರು

**ಅಂಬುಗುಳ್ಳೆ** – ನೀರಿನ ಗುಳ್ಳೆ.

**ರುವ್ವಿ** – ಕಾಸು. ದೇಹವನ್ನು ಮಾರಿದರೆ ಒಂದು ಕಾಸೂ ಬಾಳುವುದಿಲ್ಲ; ಯಮದೂತರು (ಕೊಂಬುವರು) ಬಂದು ಪ್ರಾಣವನ್ನು ಸೆಳೆದುಕೊಂಡು ಹೋಗುವಾಗ ದೇಹದ ಬೆಲೆಯೆಂದು ಒಂದು ಕಾಸನ್ನೂ ಕೊಟ್ಟು ಹೋಗುವುದಿಲ್ಲ.

**ವಿಹಿತ** = ಉಚಿತವಾದ

**Classification:** Keerthane
**Ankita:** purandara vittala
**Location:** NA

**Category:** Jeevana Sutra, Loka Neeti,

**Sub-Category:** karma, vairagya, Bhagya, kama, sittu, Madhava, santosha, Ananda, bangara, veda, punya, tirtha, madhu, shastra, harikatha, rokka, hennu, deha, mana,

**Pravachana:** NA

**Explanation:** NA